ಶ್ರೀ ಬಿ ಎಸ್. ಯಡಿಯೂರಪ್ಪ.—ನನ್ನ ಪ್ರಶ್ನೆ ಏನೆಂದರೆ ನೀವು ಏನು ಶಿಥಿಲೀಕರಣ ಕೆಲಸವನ್ನು ಹಾಕಿದ್ದೀರಿ. ಅದನ್ನು ೧೦ ವರ್ಷದ ಆಗತ್ಯದ ಮುಂದಾಲೋಚನೆ ಇಟ್ಟುಕೊಂಡು ಅದಕ್ಕೆ ಬೇಕಾಗಿರುವಂತಹ ದೊಡ್ಡ ಉಪಕರಣಗಳನ್ನು ಹಾಕುತ್ತೀರಾ ? ಅಥವಾ ಇದೇ ವಿಂಚನರಿಗಳನ್ನು ಇಟ್ಟುಕೊಂಡು ಇನ್ನು ನಾಲ್ಕಾರು ವರ್ಷದ ನಂತರ ಮತ್ತೆ ಬದಲಾವಣೆ ಮಾಡುವ ಯೋಚನೆ ಏನಾದರೂ ಇಟ್ಟುಕೊಂಡಿದ್ದೀರಾ, ಈ ರೀತಿ ಮುಂದಾಲೋಚನೆ ಇಟ್ಟುಕೊಂಡು ೧೦ ವರ್ಷಕ್ಕೆ ಕೆಪಾಸಿಟಿಯನ್ನು ಹೊಂದಿರತಕ್ಕ ವಿಂಚನರಿಯನ್ನು ಹಾಕಬೇಕೆಂದು ಯೋಚನೆ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಸಿದ್ದರಾಮಯ್ಯ.—ಈಗ ಆಗತ್ಯ ಎಷ್ಟು ಇದೆಯೋ ಅಷ್ಟನ್ನೂ ಮಾಡುತ್ತೇವೆ. ಇದಕ್ಕೆ ಹೆಚ್ಚು ಖರ್ಚು ಬೇಕಾಗುವುದಿಲ್ಲ. ಶೈತ್ಯಾಗಾರ ಮಾಡಲಿಕ್ಕೆ ಕಟ್ಟಡವು ಮುಖ್ಯವಾಗಿ ಬೇಕಾಗಿದೆ. ಮುಂದಿನ ಅವಶ್ಯಕತೆ ನೋಡಿಕೊಂಡು ನಾವು ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಕೃಷ್ಣರಾಜೇಂದ್ರ ಹತ್ತಿ ಗಿರಣಿ, ಮೈಸೂರು

೮೪(೯೯೧) ಶ್ರೀ ಪಿ.ಎಂ. ಚಿಕ್ಕಬೋರಯ್ಯ(ಚಾಮರಾಜ).— ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಪ್ರದೇಶದ ಗಿರಣಿ ಕೈಗಾರಿಕೆ ಎನಿಸಿ ಖ್ಯಾತಿಯಾದ ಶ್ರೀ ಕೃಷ್ಣ ರಾಜೇಂದ್ರ ಹತ್ತಿ ಗಿರಣಿ ಮುಚ್ಚಿ ೩ ವರ್ಷಗಳಾಗಿದ್ದು ರಾಜ್ಯ ಸರ್ಕಾರ ಕೆಲವು ಸಲ ಅದರ ಪುನರಾರಂಭದ ಭರವಸೆ ಇತ್ತಿದ್ದಾಗ್ಯೂ ಆ ಗಿರಣಿ ಇನ್ನೂ ಮುಚ್ಚಿದ ಸ್ಥಿತಿಯಲ್ಲೇ ಮುಂದುವರಿಸುತ್ತಿರಲು ಕಾರಣವೇನು ?

ಆ) ಆ ಗಿರಣಿಯಲ್ಲಿ ಕೆಲಸಕ್ಕಿದ್ದ ಸುಮಾರು ೩೦೦೦ ಕಾರ್ಮಿಕ ಕುಟುಂಬಗಳು ಬೀದಿಪಾಲಾಗಿ ನಿರ್ಗತಿಕ ಜೀವನದ ಬವಣೆಗೀಡಾಗಿದ್ದರೂ, ಅವರಿಗೆ ಯಾವ ಪರಿಹಾರವನ್ನು ಈವರೆಗೂ ಕೊಟ್ಟಿಲ್ಲದಿದ್ದಿರುವುದಕ್ಕೆ ಕಾರಣವೇನು ?

ಇ) ಈ ಗಿರಣಿಯನ್ನು ರಾಷ್ಟ್ರೀಕರಣ ಮಾಡುವುದರಿಂದಲಾದರೂ ಪ್ರಕೃತ ಬಿಕ್ಕಟ್ಟನ್ನು ಬಗೆಹರಿಸಲಿಕ್ಕೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೆ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು).—

ಅ) ರಾಜ್ಯ ಸರ್ಕಾರವು ಅನೇಕ ಪ್ರಯತ್ನಗಳನ್ನು ಮಾಡಿದರೂ ಮಾಲಿಕರು ಗಿರಣಿಯನ್ನು ಪುನಃ ಆರಂಭಿಸಲು ಒಪ್ಪದೆಯಿರುವುದರಿಂದ ಈ ಕಾರ್ಖಾನೆ ಪುನಾರಾರಂಭ ಮಾಡಲು ಸಾಧ್ಯವಾಗಿಲ್ಲ.

ಆ) ಭವಿಷ್ಯ ನಿಧಿಯಿಂದ ಪ್ರತಿಯೊಬ್ಬ ಕಾರ್ಮಿಕನಿಗೂ ೩೦೨೦ ರೂಪಾಯಿಗಳ ಮುಂಗಡ ಹಣವನ್ನು ಕೊಡಿಸಲಾಗಿದೆ.

ಇ) ರಾಷ್ಟ್ರೀಕರಣ ಮಾಡುವ ಉದ್ದೇಶ ಇಲ್ಲ.

ಶ್ರೀ ಪಿ ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೇ, ಮಾಲೀಕರು ಒಬ್ಬರೇ ಪ್ರಾರಂಭ ಮಾಡಬೇಕು ಎನ್ನುವ ಉದ್ದೇಶದಿಂದ ಸರ್ಕಾರ ಆಶ್ವಾಸನೆ ಕೊಡುತ್ತಾರೆಯೇ ಅಥವಾ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಇದನ್ನು ಪ್ರಾರಂಭ ಮಾಡಲಿಕ್ಕೆ ವಿಚಾರ ಮಾಡುತ್ತೇನೆ ಎಂಬ ಆಶ್ವಾಸನೆಯನ್ನು ಕೊಟ್ಟರೋ ಗೊತ್ತಾಗಲಿಲ್ಲ. ಇದರ ಜೊತೆಗೆ ನನ್ನ ಮನವಿ ಏನೆಂದರೆ ಸುಮಾರು ೩ ಸಾವಿರ ಕಾರ್ಮಿಕರು ಬೀದಿ ಪಾಲಾಗಿದ್ದಾರೆ, ೩ ಸಾವಿರ ಕುಟುಂಬಗಳು ಅನಾಥರಾಗಿ ಇವೊತ್ತು ಮೈಸೂರು ನಗರದಲ್ಲಿ ಒದ್ದಾಡುತ್ತಿದ್ದಾರೆ, ಅವರಿಗೆ ಸರ್ಕಾರ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಆದಷ್ಟು ಬೇಗನೆ ಸಹಾಯ ನೀಡುತ್ತದೆಯೇ, ಸಹಕಾರ ನೀಡುತ್ತದೆಯೇ ಎಂದು ಕೋರಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್,—ಮಾನ್ಯ ಅಧ್ಯಕ್ಷರೇ, ಇದು ಸುಮಾರು ೫೮ ವರ್ಷದ ಹಿಂದೆ ಪ್ರಾರಂಭವಾದ ಕಾರ್ಖಾನೆ, ಮೊದಲಿಂ ಅದು ಖಾಸಗಿಯವರದ್ದು ಆಗಿತ್ತು, ಕಾರಣಾಂತರಗಳಿಂದ

ರೋಗಗ್ರಸ್ಥವಾಯಿತು. ರೋಗಗ್ರಸ್ಥ ಆದಮೇಲೆ ಸರ್ಕಾರಿ ಕಾನೂನು ಪ್ರಕಾರ ಕ್ರಮ ತೆಗೆದು ಕೊಂಡಿದೆ. ಪುನಃ ಕಾರ್ಖಾನೆಯ ಮಾಲೀಕರು ಇದನ್ನು ಪುನರ್ ಪ್ರಾರಂಭವಾಡಂವುದಕ್ಕೆ ಪ್ರಯತ್ನ ಮಾಡುವುದಾದರೆ ಹಣಕಾಸಿನ ಸಂಸ್ಥೆಗಳಿಂದ ಅವರಿಗೆ ಸಾಲದ ನೆರವನ್ನು ಸರ್ಕಾರ ಮಾಡುವುದಕ್ಕೆ ಸಾಧ್ಯ. ಸಧ್ಯದ ಪರಿಸ್ಥಿತಿಯಲ್ಲಿ ನಾವೇ ಆ ಮಿಲ್ಲನ್ನು ತೆಗೆದುಕೊಂಡು ನಡೆಸುವ ಪ್ರಯತ್ನ ಇಲ್ಲ.

ಇದನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಯಾವಾಗಲೂ ನಾವು ಹೇಳಿಲ್ಲ. ಇದಂ ಮಾನ್ಯ ಸದಸ್ಯರಿಗೂ ಗೊತ್ತಿದೆ. ಹಿಂದೆ ಹಲವಾರು ಸಲ ಈ ಮಾತನ್ನು ವೈಸ್‌ರಾಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸಹ ಹೇಳಿದ್ದಾರೆ. ಈ ಹತ್ತಿ ಗಿರಣಿಯನ್ನು ವಂತ್ತೆ ನಡೆಸುವ ಬಗ್ಗೆ ಹಲವಾರು ಸಭೆಗಳನ್ನು ನನ್ನ ಸಮ್ಮುಖದಲ್ಲಿ ನಡೆಸಲಾಯಿತು ವಂತ್ತು ಕಾರ್ಮಿಕ ಮಂತ್ರಿಗಳ ಸಮ್ಮುಖದಲ್ಲಿಯೂ ಸಹ ಹಲವಾರು ಸಲ ಸಭೆಗಳನ್ನು ನಡೆಸಲಾಯಿತು. ಈಗ ಅವರಿಗೆ ಏನು ರಿಯಾಯಿತಿಗಳನ್ನು ಕೊಟ್ಟಿದ್ದೇವೆಂದರೆ :—

a) Permission to sell excess land belonging to K. R. Mills Mysore .

b) Allotment of additional power to the extent of 1·5 laks units ,

c) Approval to refund of sales tax amount due from the mills for the years 1986-87 to 1990-91 as loan repayable in 10 instalments starting from 1991-92.

ಇಷ್ಟು ಸವಲತ್ತುಗಳನ್ನು ಆ ಮಿಲ್ ಮಾಲೀಕರಿಗೆ ಕೊಟ್ಟಿದ್ದರೂ ಸಹ ವಂತ್ತು ಇಷ್ಟು ದೊಡ್ಡ ಜವಾಬ್ದಾರಿಗಳನ್ನು ಅವರಿಗೆ ವಹಿಸಿಕೊಟ್ಟರೂ ಸಹ ಅವರು ಇದನ್ನು ವಂತ್ತೆ ಪ್ರಾರಂಭ ಮಾಡಲು ಏನಾದರೂ ಒಂದು ಸಬೂಬನ್ನು ಹೇಳುತ್ತಿರುತ್ತಾರೆ. ಆದಕ್ಕಾಗಿ ನಾವು ಏನಂ ಮಾಡಿದ್ದೇವೆಂದರೆ, ಈಗ ಕೇಂದ್ರ ಸರ್ಕಾರದವರು ಇಂತಹ ರೋಗಗ್ರಸ್ತ ಕಾರ್ಖಾನೆಗಳ ಬಗ್ಗೆ ಒಂದು ತೀರ್ಮಾನ ಮಾಡುವುದಕ್ಕಾಗಿ ಒಂದು ಸ್ಟಾಚ್ಯುಟರಿ ಬಾಡಿಯನ್ನು ಏನು ಮಾಡಿದ್ದಾರೆ ; ಆದಕ್ಕೆ ಇದನ್ನು ರೆಫರ್ ಮಾಡಿದ್ದೇವೆ. ಆ ಬಿ.ಐ.ಎಫ್.ಆರ್.ನವರು ಕಾನೂನು ಪ್ರಕಾರ ನಮಗೆ ಇನ್ನು ಎರಡು ತಿಂಗಳೊಳಗಾಗಿ ಒಂದು ವರದಿಯನ್ನು ಕೊಡುತ್ತಾರೆ ನಂತರ ನಾವು ಆ ವರದಿ ಆಧಾರದ ಮೇಲೆ ವಂಂದಿನ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯವನ್ನು ಕಾನೂನು ಪ್ರಕಾರ ಬಿ.ಐ.ಎಫ್.ಆರ್ ಗೆ ರೆಫರ್ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಇದೇ ವಿಚಾರವನ್ನು ನಾವೂ ಸಹ ಇಲ್ಲಿ ಹಲವಾರು ಸಲ ಪ್ರಸ್ತಾಪ ಮಾಡಿದ್ದೇವೆ. ಅನೇಕ ಸಲ ಇಲ್ಲಿ ಚರ್ಚೆ ಆಗಿದೆ. ಇತ್ತೀಚೆಗೆ ಮಾನ್ಯ ಕಾರ್ಮಿಕ ಮಂತ್ರಿಗಳ ಸಮ್ಮುಖದಲ್ಲಿ ಚರ್ಚೆ ನಡೆದಾಗ ಈ ಮಿಲ್‌ನ ಕಾರ್ಮಿಕ ಪ್ರತಿನಿಧಿಗಳು ಹಾಜರಿದ್ದರು. ನಿಮ್ಮ ಇಲಾಖೆಯ ಅಧಿಕಾರಿಗಳು ಸಹ ಹಾಜರಾಗಿದ್ದರು. ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸಹ ಇದ್ದರು. ನಾನು ಸಹ ಇದ್ದೆ. ಆ ಸಂದರ್ಭದಲ್ಲಿ ಬಿನ್ನಿ ಮಿಲ್‌ನವರು ಇದನ್ನು ತೆಗೆದುಕೊಂಡು ನಡೆಸಲು ತಯಾರಿದ್ದರೆ ಅವರಿಗೆ ಕೊಡಬಹುದೆಂಬ ಅಭಿಪ್ರಾಯ ಬಂತು. ಬಿನ್ನಿ ಮಿಲ್‌ನವರು ಇದನ್ನು ತೆಗೆದುಕೊಂಡು ನಡೆಸಲು ಇಷ್ಟಪಟ್ಟರೆ ಈ ಮಿಲ್ ಮಾಲೀಕರು ಅವರಿಗೆ ವಹಿಸಿಕೊಡುತ್ತಾರೋ ಅಥವಾ ಇಲ್ಲವೋ ಎಂಬ ಅಭಿಪ್ರಾಯ ಸಹ ಆ ದಿನ ವ್ಯಕ್ತವಾಯಿತು. ಮುಖ್ಯವಾಗಿ ಇದನ್ನು ನೀವೇ ಬಗೆಹರಿಸಬೇಕಾಗಿದೆ. ಸರ್ಕಾರದವರೇ ಇದನ್ನು ವಹಿಸಿಕೊಂಡು ನಡೆಸಲು ಸಾಧ್ಯವಾಗದ್ದರೆ ಬೇರೆಯವರಿಗಾದರೂ ವಹಿಸಿಕೊಡುವ ಬಗ್ಗೆ ನೀವು ಏಸಕ್ಕೆ ಪಹಿಸಬೇಕು. ಆದರೆ ನೀವು ಇದು ಯಾವುದಕ್ಕೂ ತಯಾರಿಲ್ಲ. ಇರತಕ್ಕಂಥ ಕಂಡಿಷನ್‌ಗಳನ್ನು ನೋಡಿ ಬಿನ್ನಿ ಮಿಲ್‌ನವರು ಇದನ್ನು ವಹಿಸಿಕೊಳ್ಳುವುದಕ್ಕೆ ತಯಾರಿದ್ದಾರೆ. ಈ ಮಾತನ್ನು ಕಾರ್ಮಿಕ ಮಂತ್ರಿಗಳೇ ಹೇಳಿದರು. It is a possibility of reopening the Mills and we will consider provided it is handed over to them. Efforts should be made to see that it is handed over to them. Government cannot shirk its responsibility,

ಶ್ರೀ ಜಿ. ಹೆಚ್. ಪಟೇಲ್.—ಸರ್ಕಾರದ ಜವಾಬ್ದಾರಿ ಏನಿದೆ, ಅದನ್ನು ನಾವು ಸಂಪೂರ್ಣವಾಗಿ ನಿಭಾಯಿಸಿದ್ದೇವೆ ನಾವು ಎಷ್ಟು ದೂರ ಹೋಗಿ ಸಹಾಯ ಮಾಡಬಹುದೋ ಅಷ್ಟೆಲ್ಲಾ ಸಹಾಯ ಮಾಡಲು ಸಿದ್ದವಿದ್ದೇವೆ. ಆದರೆ ಅದರ ಮಾಲೀಕರು ಹಲವಾರು ಸಲ ಚರ್ಚೆಗೆ ಬಂದಾಗ ಯಾವುದೇ ಒಂದು ಇತ್ಯರ್ಥಕ್ಕೆ ಬರುತ್ತಿಲ್ಲ. ಈ ಬಗ್ಗೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಬಿಟ್ಟು ಮತ್ತೆ ಬೇರೆ ಏನನ್ನೂ ಮಾಡುವುದಕ್ಕಾಗುವುದಿಲ್ಲ. ಇದು ನಿಮಗೂ ಗೊತ್ತಿದೆ, ಈಗ ಇದನ್ನು ಬಿ.ಐ.ಎಫ್.ಆರ್.ಗೆ ರೆಫರ್ ಮಾಡಿದ್ದೇವೆ. ಅವರು ಈ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಅದರ ಪ್ರಕಾರ ಈ ಮಿಲ್ ಮಾಲೀಕರು ನಡೆದುಕೊಳ್ಳಬೇಕಾಗುತ್ತದೆ. ಆದರೆ ಇದನ್ನು ಸರ್ಕಾರವೇ ವಹಿಸಿಕೊಂಡು ನಡೆಸುವುದಕ್ಕಾಗುವುದಿಲ್ಲ.

ರಾಜ್ಯದಲ್ಲಿನ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನಿಲುಗಡೆ

೫೮೨. ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ರಾಜ್ಯಾದ್ಯಂತ ನದಿಗಳ ದಂಡೆಗಂಟ ಇರುವ ಪಂಪುಸೆಟ್ಟುಗಳ ವಿದ್ಯುತ್ ಪೂರೈಕೆಯನ್ನು ಕಡಿಯುವ ನೀರಿನ ತೊಂದರೆ ಬರುವ ಕಾರಣದಿಂದ ಜನವರಿ ೩೧ ರಿಂದ ಪಂಪುಸೆಟ್ಟುಗಳ ವಿದ್ಯುತ್ ಸರಬರಾಜು ಮಾಡುವುದಾಗಿ ಘೋಷಿಸಿದ್ದು, ಇದು ಅನಿವಾರ್ಯವಾಗಿ ಇದ್ದರೂ ಸಹಿತ ವಿದ್ಯುತ್ ನಿಲುಗಡೆ ಮಾಡುವುದು ಸರಿಯೇ ;

ಆ) ಹಿಂಗಾರು ಮಳೆ ಚೆನ್ನಾಗಿ ಆಗಿರುವುದರಿಂದ ನದಿಗಳಲ್ಲಿ ಸತತವಾಗಿ ನೀರು ಹರಿಯುವ ಪ್ರದೇಶಗಳಲ್ಲಿ ಹಾಗೂ ಕುಡಿಯುವ ನೀರಿನ ಯೋಜನೆಯನ್ನು ರೂಪಿಸದಿದ್ದಂಥ ಸ್ಥಳಗಳಲ್ಲಿ ವಿದ್ಯುತ್ ಪೂರೈಕೆಯ ನಿಲುಗಡೆ ಹಿಂದಕ್ಕೆ ಪಡೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಜಿ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು),—

ಅ) ಅನೇಕ ಗ್ರಾಮಗಳಿಂ ಮತ್ತು ನಗರಗಳಿಂ ಮತ್ತು ದೊಡ್ಡ ಪಟ್ಟಣಗಳೂ ಸಹ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವಕ್ಕೆ ಒಳಗಾಗಿದ್ದುದರಿಂದ ರಾಜ್ಯ ಮಟ್ಟದ ಸಣ್ಣ ನೀರಾವರಿ ಸಮನ್ವಯ ಸಮಿತಿಯ ಸಭೆಯಲ್ಲಿ, ನದಿಗಳಿಂದ ಪ್ರತಿ ವರ್ಷವು ಬೇಸಿಗೆ ಕಾಲದಲ್ಲಿ (ಫೆಬ್ರವರಿಯಿಂದ ಜೂನ್ ಕೊನೆಯವರೆಗೆ) ನೀರಾವರಿಗೆ ನೀರನ್ನು ಎತ್ತುವುದನ್ನು ನಿಷೇಧಿಸಬೇಕೆಂದು ನಿರ್ಧರಿಸಲಾಯಿತು. ಇಂತಹ ಗ್ರಾಮಗಳಿಂ ಮತ್ತು ನಗರಗಳಿಗೆ ಕುಡಿಯುವ ನೀರಿನ ಅಭಾವವು ಉಂಟಾಗದಿರಲೆಂಬ ಉದ್ದೇಶದಿಂದ ಇಂತಹ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕವನ್ನು ತೆಗೆದುಹಾಕಬೇಕೆಂದು ಸುತ್ತೋಲೆಯಲ್ಲಿ ಸೂಚನೆ ಕೊಡಲಾಯಿತು.

ಆ) ರೈತರಿಗೆ ಅನಾನುಕೂಲವಾಗುತ್ತದೆಂದು ಜನವಿಗಳು ಬಂದಿರುವುದರಿಂದ ಮತ್ತು ಕುಡಿಯುವ ನೀರಿನ ಲಭ್ಯತೆಯು ಸುಧಾರಿಸಿರುವುದರಿಂದಲೂ ಇಂತಹ ನದಿ ದಂಡೆಗಳ ಮೇಲಿನ ನೀರಾವರಿ ಪಂಪು ಸೆಟ್ಟುಗಳಿಗೆ ೧೯೮೮ನೇ ಇಸವಿಯ ಬೇಸಿಗೆ ತಿಂಗಳುಗಳಲ್ಲಿ ವಿದ್ಯುತ್ ಸಂಪರ್ಕವನ್ನು ತೆಗೆದುಹಾಕಬಾರದೆಂದು ವಿದ್ಯುತ್ ಮಂಡಳಿಯವರಿಗೆ ಸೂಚನೆ ಕೊಡಲಾಗಿದೆ.

(ಪ್ರಶ್ನೆ ೮೬ (೭೫೯) ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ)

ತುಂಗಭದ್ರಾ ಫೈಬರ್ಸ್ ಕಾರ್ಖಾನೆ ಬಗ್ಗೆ ವಿಜಯನಗರ

೫೮೯. ಶ್ರೀ ಯು. ಭೂಪತಿ (ಸಂಡೂರು) —ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಫೈಬರ್ಸ್ ಕಾರ್ಖಾನೆಯಿಂ ಉತ್ಪಾದನೆಯನ್ನು ನಡಿಸುತ್ತಿದೆಯೇ ;